# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಹೆಚ್ ಎಸ್ ಗೋಪಿನಾಥ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವ ವಿಷಯಕ್ಕೆ ಉತ್ತರ:-

**ವಿಷಯ:-**

ಆನೇಕಲ್ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಗೆ 23 ವಾರ್ಡ್‌ಗಳು ಸುಮಾರು 50 ಸಾವಿರ ಜನಸಂಖ್ಯೆ ಹೊಂದಿದೆ. ಇದರಲ್ಲಿ ಕೈಗಾರಿಕಾ ಪ್ರದೇಶಗಳೇ ಹೆಚ್ಚು, ಪುರಸಭೆ ಬರುವ ಕೈಗಾರಿಕಾ ಪ್ರದೇಶಗಳ ಕಾರ್ಖಾನೆಗಳ ತೆರಿಗೆ ವಸೂಲಾತಿಯನ್ನು ಕೆ.ಐ.ಎ.ಡಿ.ಬಿ ಪಡೆದುಕೊಳ್ಳುವುದರಿಂದ ಬೊಮ್ಮಸಂದ್ರ ಪುರಸಭೆಗೆ ಆರ್ಥಿಕ ಸಂಕಷ್ಟ ಎದುರಾಗಿದೆ ಎಂದು ಮುಖ್ಯಾಧಿಕಾರಿ ವೆಂಕಟೇಶಪ್ಪ ಕಳವಳ ವ್ಯಕ್ತಪಡಿಸಿದ್ದಾರೆ. ಈ ಮೊದಲ ಬೊಮ್ಮಸಂದ್ರ ಪುರಸಭೆಗೆ ರೂ.13 ಕೋಟಿ ತೆರಿಗೆ ಸಂಗ್ರಹವಾಗುತ್ತಿತ್ತು. ಆದರೆ, ಕಳೆದ ವರ್ಷದಿಂದ ಕೆ.ಐ.ಎ.ಡಿ.ಬಿ ನಮ್ಮ ಪ್ರದೇಶದಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ ತೆರಿಗೆ ಸಂಗ್ರಹಿಸುತ್ತಿದೆ. ಇದರಿಂದ ನಮ್ಮ ತೆರಿಗೆ ಸಂಗ್ರಹ ತುಂಬ ಕಡಿಮೆ ಆಗಿದೆ. ಕೆ.ಐ.ಎ.ಡಿ.ಬಿ ಸ್ಥಳೀಯ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯಗಳಿಗೆ ಶೇ.30 ರಷ್ಟು ಅನುದಾನವನ್ನು ನೀಡಬೇಕೆಂಬ ಸರ್ಕಾರದ ಆದೇಶವಿದೆ. ಈ ಬಗ್ಗೆ ಪತ್ರವನ್ನು ಬರೆಯಲಾಗಿದೆ. ಆಗಿದ್ದಾಗ್ಯೂ ಇಲ್ಲಿಯವರೆಗೂ ಕೆ.ಐ.ಎ.ಡಿ.ಬಿ ಇಂದ ಹಣ ಸಂದಾಯವಾಗಿಲ್ಲ. ಇನ್ನೂ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚಾಗಿದ್ದು ಕೊಳವೆಬಾವಿ ಕೊರೆಸಲು ಹಣ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ.

ಬೊಮ್ಮಸಂದ್ರ ಪುರಸಭೆ ಇಂದು ಗಂಭೀರವಾದ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದು ಬಹಳ ಚಿಂತಾಜನಕ ಸಂಗತಿಯಾಗಿದೆ. ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಈ ಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದರೂ, ಪುರಸಭೆಗೆ ಬೇಕಾದಷ್ಟು ಆದಾಯ ಮತ್ತು ಅನುದಾನ ಲಭ್ಯವಾಗುತ್ತಿಲ್ಲ. ಈ ಕಾರಣದಿಂದ ಪುರಸಭೆಯಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತಿವೆ. ಕುಡಿಯುವ ನೀರು, ರಸ್ತೆ, ಒಳಚರಂಡಿ ಸೇರಿದಂತೆ ಹಲವಾರು ಮೂಲಭೂತ ಸೌಲಭ್ಯಗಳ ನಿರ್ವಹಣೆಗೆ ಹಣದ ಕೊರತೆ ಪುರಸಭೆಯ ಸಿಬ್ಬಂದಿಗಳಿಗೆ ಸಮಯಕ್ಕೆ ಸರಿಯಾಗಿ ವೇತನ ನೀಡಲು ಕಷ್ಟವಾಗುತ್ತಿರುವುದು ಮತ್ತು ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇದೇ ಸಮಯದಲ್ಲಿ ಬೊಮ್ಮಸಂದ್ರ ಒಂದು ಪ್ರಮುಖ ಕೈಗಾರಿಕಾ ಪ್ರದೇಶವಾಗಿದ್ದರೂ, ಅದರ ಅನುಗುಣವಾಗಿ ಪುರಸಭೆಗೆ ಸಮರ್ಪಕ ಆದಾಯ ದೊರೆಯುತ್ತಿಲ್ಲ ಎಂಬುದು ಕೂಡ ಗಮನಾರ್ಹ ವಿಷಯವಾಗಿದೆ. ಆದ್ದರಿಂದ ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಬೊಮ್ಮಸಂದ್ರ ಪುರಸಭೆಗೆ ತುರ್ತು ವಿಶೇಷ ಅನುದಾನವನ್ನು ಬಿಡುಗಡೆ ಮಾಡಿ, ಪುರಸಭೆಯ ಹಣಕಾಸು ಸ್ಥಿತಿಯನ್ನು ಬಲಪಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

**ಉತ್ತರ**

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 151 ಎಂಎಲ್ ಆರ್ 2015, ದಿನಾಂಕ:24.6.2025 ರಂತೆ ಬೊಮ್ಮಸಂದ್ರ, ಕಿತ್ತಿಗಾನಹಳ್ಳಿ, ಬನಹಳ್ಳಿ ಗ್ರಾಮಗಳನ್ನು ಬೊಮ್ಮಸಂದ್ರ ಗ್ರಾಮ ಪಂಚಾಯಿತಿಯಿಂದ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ. ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ಕಾಯ್ದೆ 2022 (2023ರ ಕರ್ನಾಟಕ ಕಾಯ್ದೆ 5) ಗೆಜೆಟ್ ದಿನಾಂಕ:12.01.2023 ರಂತೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಯನ್ನು ಅಧಿಸೂಚಿತ ವಿಶೇಷ ಹೂಡಿಕೆ ಪ್ರದೇಶ ಕಾಯ್ದೆ 2022 ಎಂದು ಘೋಷಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ಕಲಂ-29ರ ಅಧ್ಯಾಯ-11ರಲ್ಲಿ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರವು ಕೈಗಾರಿಕಾ ಪ್ರದೇಶದ ಆಸ್ತಿ ತೆರಿಗೆಯನ್ನು ವಸೂಲಿ ಮಾಡಿ, ವಸೂಲಿಯಾದ ಆಸ್ತಿ ತೆರಿಗೆಯಲ್ಲಿ ಶೇ.30 ರಷ್ಟನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲು ನಿರ್ದೇಶಿಸಲಾಗಿರುತ್ತದೆ.

ದಿನಾಂಕ:01.04.2025 ರಿಂದ ಜಾರಿಗೆ ಬರುವಂತೆ ಸದರಿ ಪ್ರದೇಶಗಳ ತೆರಿಗೆಗಳ ಮೌಲ್ಯಮಾಪನ, ತೆರಿಗೆ ನಿಗದಿ ಮತ್ತು ವಸೂಲಿ ಮಾಡಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಸಂಗ್ರಹಿಸಲಾಗುವುದೆಂದು ಬೊಮ್ಮಸಂದ್ರ ಪುರಸಭೆಗೆ ನಿರ್ದೇಶಿಸಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ವಲಯ ಕಚೇರಿ, ಬೆಂಗಳೂರು ರವರ ಪತ್ರದ ದಿನಾಂಕ:01.09.2025ರಲ್ಲಿ ಬೊಮ್ಮಸಂದ್ರ ಪುರಸಭೆ ಕೈಗಾರಿಕಾ ಪ್ರದೇಶದೊಳಗಿನ ಕೈಗಾರಿಕೆಗಳಿಂದ ತೆರಿಗೆಗಳ ಮೌಲ್ಯಮಾಪನ, ತೆರಿಗೆ ನಿಗದಿ ಮತ್ತು ತೆರಿಗೆ ಸಂಗ್ರಹಣೆ ಮಾಡುವ ಅಧಿಕಾರವನ್ನು ಸಂಪೂರ್ಣವಾಗಿ ಕೆ.ಐ.ಎ.ಡಿ.ಬಿ ವಶಪಡಿಸಿಕೊಂಡಿರುವುದರಿಂದ ಪುರಸಭೆಯು ಯಾವುದೇ ರೀತಿಯ ತೆರಿಗೆಯನ್ನು ಸಂಗ್ರಹಣೆ ಮಾಡಲು ಅಧಿಕಾರವಿರುವುದಿಲ್ಲವೆಂದು ಬೊಮ್ಮಸಂದ್ರ ಪುರಸಭೆಗೆ ನಿರ್ದೇಶಿಸಲಾಗಿರುತ್ತದೆ.

ಅದರಂತೆ, ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯ ಕೈಗಾರಿಕಾ ಪ್ರದೇಶವು ವಾರ್ಡ್ ನಂ: 02, 07,05 ಮತ್ತು 09 ರಲ್ಲಿ ಸುಮಾರು 901 ಎಕರೆಗಳನ್ನು ವ್ಯಾಪ್ತಿಯಲ್ಲಿದ್ದ 431 ಕಂಪನಿಗಳು ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ಕಾಯ್ದೆ 2022 ರ ಅಧಿಸೂಚನೆಯಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಒಳಪಡುತ್ತದೆ. 2025-26ನೇ ಸಾಲಿಗೆ ಬೊಮ್ಮಸಂದ್ರ ಪುರಸಭೆಯಲ್ಲಿ ಒಟ್ಟಾರೆಯಾಗಿ ರೂ.13.08 ಕೋಟಿಗಳಷ್ಟು ಆಸ್ತಿ ತೆರಿಗೆ ಬೇಡಿಕೆಯನ್ನು ನಿಗದಿಪಡಿಸಿಕೊಳ್ಳಲಾಗಿತ್ತು. ಈ ಪೈಕಿ ಬೊಮ್ಮಸಂದ್ರ ಪುರಸಭೆಯ ಕೈಗಾರಿಕಾ ಪ್ರದೇಶದ ಆಸ್ತಿಗಳಿಂದ ರೂ.8.50 ಕೋಟಿಗಳಷ್ಟು ಆಸ್ತಿ ತೆರಿಗೆ ಸಂಗ್ರಹವಾಗುತ್ತಿತ್ತು, ಪ್ರಸ್ತುತ ಪುರಸಭೆ ವ್ಯಾಪ್ತಿಯ ವಸತಿ, ವಾಣಿಜ್ಯ ಹಾಗೂ ಇನ್ನಿತರೆ ಆಸ್ತಿಗಳಿಂದ ರೂ.4.58 ಕೋಟಿಗೆ ಆಸ್ತಿ ತೆರಿಗೆ ಬೇಡಿಕೆಯು ಇಳಿಕೆಯಾಗಿರುತ್ತದೆ.

ಪ್ರಸ್ತುತ ಕೈಗಾರಿಕಾ ಪ್ರದೇಶದ ವ್ಯಾಪ್ತಿಯ ಆಸ್ತಿ ತೆರಿಗೆಯನ್ನು ಕೆ.ಐ.ಎ.ಡಿ.ಬಿ ಇಲಾಖೆಯಿಂದ ಪಾವತಿಸಿಕೊಳ್ಳುತ್ತಿದ್ದು, ವಸೂಲಿಯಾದ ಆಸ್ತಿ ತೆರಿಗೆಯಲ್ಲಿನ ಶೇ.30ರಷ್ಟನ್ನು ಬೊಮ್ಮಸಂದ್ರ ಪುರಸಭೆಗೆ ಪ್ರತಿ ಮಾಹೆಯಾನ ಪಾವತಿಸಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೆ.ಐ.ಎ.ಡಿ.ಬಿ, ಖನಿಜ ಭವನ, ಬೆಂಗಳೂರು ರವರಿಗೆ ಕೋರಲಾಗಿರುತ್ತದೆ.

ಕರ್ನಾಟಕ ಕೈಗಾರಿಕಾ ಪ್ರದೇಶದಿಂದ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರು ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯ ಕೈಗಾರಿಕಾ ಪ್ರದೇಶದಿಂದ 2025-26 ನೇ ಸಾಲಿನಲ್ಲಿ ಈಗಾಗಲೇ ವಸೂಲಿ ಮಾಡಿರುವ ಆಸ್ತಿ ತೆರಿಗೆಯ ಶೇ. 30ರಷ್ಟನ್ನು ಪುರಸಭೆಗೆ ನಿಯಮಾನುಸಾರ ಪಾವತಿಸಲು ಕ್ರಮ ತೆಗೆದುಕೊಳ್ಳಲು ಕೋರಲಾಗಿರುತ್ತದೆ. ಇದರಿಂದ ಪುರಸಭೆಗೆ ವಿಶೇಷ ಅನುದಾನ ನೆರವು ಇರುವುದಿಲ್ಲ.

ಸಂಖ್ಯೆ:ನಅಇ 57ಎಸ್ಎಫ್‌ಸಿ 2026

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು